ಶ್ರೀ ಬಿ. ಎಸ್. ಯಡಿಯೂರಪ್ಪ.—ಅದರ ಬಗ್ಗೆ ಹಾಗೆ ಮಾಡಿ, ನಾನು ಇನ್ನೊಂದು ಉಪ ಪ್ರಶ್ನೆ ಕೇಳಿದ್ದೆ. ಇದಕ್ಕೆ ಸಂಬಂಧ ಇಲ್ಲ ಎಂದು ತಾವು ಹೇಳಬಹುದು. ಆದರೆ ರಾಜ್ಯದ ರೈತರ ಹಿತದೃಷ್ಟಿಯಿಂದ ನಾನು ಕೇಳುತ್ತಿದ್ದೇನೆ. ನಾವು ಇವತ್ತು ಸದನ ಮುಂಗಿಸುತ್ತಿದ್ದೇವೆ. ನಾನು ತಮ್ಮಲ್ಲಿ ವಿನಂತಿ ಮಾಡುವುದು ಏನೆಂದರೆ ತಮ್ಮ ಇಲಾಖೆಯಿಂದ ಅಧಿಕಾರಿಗಳಿಗೆ ಸೂಚನೆ ಕೊಡಬೇಕು. ಈ ಮಳೆಗಾಲದಲ್ಲಿ ಹೈಬ್ರಿಡ್ ಹತ್ತಿ ಬಿತ್ತನೆ ಬೀಜಕ್ಕೆ ರಾಜ್ಯದ್ಯಂತ ಬೇಡಿಕೆ ಇದೆ. ಅದನ್ನು ಸಂಗ್ರಹ ಮಾಡುವ ಸಲುವಾಗಿ ತಮ್ಮಿಂದ ಏನೂ ವಿಶೇಷ ಪ್ರಯತ್ನವಾಗಿಲ್ಲ. ಬಿತ್ತನೆ ಬೀಜ ಇಲ್ಲದೆ ನಾಳೆ ಹತ್ತಿ ಬಿತ್ತನೆ ಮಾಡುವುದಕ್ಕೆ ಆಗದೇ ರೈತರು ಕಂಗಾಲಾಗುವಂತಹ ಪರಿಸ್ಥಿತಿ ಇದೆ, ರೈತನಿಗೆ ಹತ್ತಿ ಒಳ್ಳೆಯ ಬೆಲೆ ಸಿಗುವುದರಿಂದ ಆ ಕಡೆಗೆ ವಿಶೇಷ ಗಮನ ಕೊಡುತ್ತಿದ್ದಾನೆ. ಈ ಹೈಬ್ರಿಡ್ ಹತ್ತಿ ಬೀಜಗಳನ್ನು ಸಂಗ್ರಹಣೆ ಮಾಡಿ ವಿತರಣೆ ಮಾಡುವುದಕ್ಕೆ ವಿಶೇಷ ಕಾರ್ಯಕ್ರಮ ತೆಗೆದುಕೊಂಡು ಆ ಕಡೆ ಗಮನ ಕೊಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು ಅತ್ಯಂತ ಅಗತ್ಯವಾಗಿ ಆಗಬೇಕಾದ ಕೆಲಸ ಎಂದು ನಾನು ಭಾವಿಸುತ್ತೇನೆ. ಅಂಕಿ ಅಂಶಗಳನ್ನು ಎಷ್ಟು ಕಲೆಕ್ಟ್ ಮಾಡುವುದಕ್ಕೆ ಸಾಧ್ಯ ಅದನ್ನೆಲ್ಲಾ ಪ್ರಯತ್ನ ಮಾಡುತ್ತೇನೆಂದು ಮಾನ್ಯ ಸದಸ್ಯರಿಗೆ ನಾನು ತಿಳಿಸುತ್ತೇನೆ.

ಸಹಕಾರಿ ಸಂಘಗಳ ಸಂಖ್ಯೆ

೩೦೮ (೬೧೫) ಶ್ರೀಮತಿ ಸುಮಾವಸಂತ (ವೀರಾಜಪೇಟೆ).—ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ಸೇವಾ ಸಹಕಾರ ಸಂಘಗಳಿವೆ?

(ಆ) ಈ ಪೈಕಿ ಕೊಡಗು ಜಿಲ್ಲೆಯಲ್ಲಿ ಎಷ್ಟು ಸಹಕಾರ ಸಂಘಗಳು ಲಾಭ ಮತ್ತು ನಷ್ಟದಲ್ಲಿವೆ ?

(ಇ) ನಷ್ಟದಲ್ಲಿ ನಡೆಯುತ್ತಿದ್ದರೆ ಅದಕ್ಕೆ ಕಾರಣಗಳೇನು?

(ಈ) ನಷ್ಟದಲ್ಲಿ ನಡೆಯುತ್ತಿದ್ದಲ್ಲಿ ಸರಕಾರ ಅದನ್ನು ನಡೆಸಲು ಏನು ಕ್ರಮ ಕೈಗೊಳ್ಳುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು).—

(ಅ) ೪,೫೩೩.

(ಆ) ೩೭ ಸಂಘಗಳು ಲಾಭದಲ್ಲಿವೆ ಮತ್ತು ೩೪ ಸಂಘಗಳು ನಷ್ಟದಲ್ಲಿವೆ.

(ಇ) ಸಾಕಷ್ಟು ಪ್ರಮಾಣದಲ್ಲಿ ಸಾಲದ ವ್ಯವಹಾರ ನಡೆಯದೆ ಇರುವುದು ಹಾಗು ಸಾಲ ವಸೂಲಾತಿಯಾಗದೇ ಇರುವುದು, ಹಣದ ದುರುಪಯೋಗವಾಗಿರುವುದು, ಸ್ಥಿರಾಸ್ತಿ ಮೇಲೆ ಸವಕಳಿ ತೆಗೆದಿರುವುದು.

(ಈ) ವ್ಯಾಪಾರ ಅಭಿವೃದ್ಧಿ ಯೋಜನೆಯನ್ನು ಕಾರ್ಯರೂಪಕ್ಕೆ ತಂದು ಮತ್ತು ಸಾಲ ವಸೂಲಾತಿಯನ್ನು ಹೆಚ್ಚಿಸಿ ನಷ್ಟದಲ್ಲಿ ನಡೆಯುತ್ತಿರುವ ಸಂಘಗಳ ನಷ್ಟವನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀಮತಿ ಸುಮಾವಸಂತ.—ಸನ್ಮಾನ್ಯ ಅಧ್ಯಕ್ಷರೇ, ೩೧ ಸೇವಾ ಸಂಘಗಳು ನಷ್ಟದಲ್ಲಿ ಇದೆ ಎಂದು ಹೇಳಿದ್ದಾರೆ. ಸಾಕಷ್ಟು ಪ್ರಮಾಣದಲ್ಲಿ ಸಾಲದ ವ್ಯವಹಾರ ನಡೆಯದೆ ಮತ್ತು ಹಣದ ದುರುಪಯೋಗ ವಾಗಿರುವುದರಿಂದ ನಷ್ಟದಲ್ಲಿ ಇದೆ ಎಂದು ಹೇಳಿದ್ದಾರೆ. ಈ ಹಣ ದುರುಪಯೋಗ ಮಾಡಿದಂಥ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಅಧಿಕಾರಿಗಳು ಮತ್ತು ನಾನ್ ಆಫೀಷಿಯಲ್ಸ್ ಇದ್ದಾರೆ. ಇಬ್ಬರ ಮೇಲೂ ಕೂಡ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತೇನೆ.

ಶ್ರೀಮತಿ ಸುಮಾವಸಂತ.—ಏಕೆ ಸಾಲ ವಸೂಲಾತಿ ಮಾಡುತ್ತಿಲ್ಲವೆಂದು ಕೇಳುತ್ತೇನೆ, ಮತ್ತು ಆರ್ಥಿಕವಾಗಿ ಶೇಕಡ ೪೦ ಪರ್ಸೆಂಟ್ ವಸೂಲಾತಿಯಾದ ಸಹಕಾರ ಸಂಘಗಳಿಗೆ ತಾವು ಸಾಲ ಮಂಜೂರು ಮಾಡದಿದ್ದಾಗ ನಷ್ಟ ಕಡಿಮೆಯಾಗುವುದಿಲ್ಲವೇ ಎಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸುಮಾರು ೩೨ ಸೊಸೈಟಿಗಳು ಏನು ಲುಕ್ಸಾನಿನಲ್ಲಿವೆ ಅಲ್ಲಿ ಸಾಲ ವಸೂಲಾತಿ ಚೆನ್ನಾಗಿ ಇಲ್ಲದ ಕಾರಣ ಈ ರೀತಿಯಾಗಿದೆ. ನಬಾರ್ಡ್‌ನ ನಾರ್ಮ್ಸ್ ಪ್ರಕಾರ ಒಂದು ಸಂಘ ಸಬಲವಾಗಿರಬೇಕಾದರೆ ಅದರ ಬೆಳೆ ಸಾಲದ ವ್ಯವಹಾರ ಕನಿಷ್ಟ ೧೦ ಲಕ್ಷ ರೂಪಾಯಿ ಯಾದರೂ ಇರಬೇಕು. ಆದರೆ ಹಾನಿಯಲ್ಲಿರುವ ೩೨ ಸಂಘಗಳ ಪೈಕಿ ಸುಮಾರು ೧೭ ಸಂಘಗಳ ಸಾಲದ ವ್ಯವಹಾರ ೧೦ ಲಕ್ಷಕ್ಕಿಂತಲೂ ಕಡಿಮೆ ಇದೆ. ಎರಡನೆಯದಾಗಿ ಹಾನಿಯಲ್ಲಿರುವ ಸುಮಾರು ೩೨ ಸಂಘಗಳು ಏನಿವೆ ಕೊರ್ಗ್‌ನಲ್ಲಿ, ಆದರ ಪೈಕಿ ೨೭ ಸಂಘಗಳಲ್ಲಿ ಹಣದ ದುರುಪಯೋಗವಾಗಿದೆ. ಹಣದ ದುರುಪಯೋಗ ಪ್ರಮಾಣ ಕನಿಷ್ಟ ೧೦ ಸಾವಿರ ರೂಪಾಯಿಯಿಂದ ಎರಡು ಲಕ್ಷ ೧೬ ಸಾವಿರ ರೂಪಾಯಿವರೆಗೆ ಆಗಿರುತ್ತದೆ. ಮೂರನೆಯದಾಗಿ ಸುಮಾರು ೩೨ ಸಂಘಗಳ ಪೈಕಿ ೧೭ ಸಂಘಗಳು ಸಾಲ ವಸೂಲಾತಿ ಶೇಕಡ ೬೦ ಕ್ಕಿಂತಲೂ ಕಡಿಮೆ ಇದೆ. ಈ ರೀತಿಯಾಗಿ ಆ ಸಂಘಗಳಲ್ಲಿ ವ್ಯವಹಾರ ನಡೆದಿದ್ದಕ್ಕಾಗಿ ಅವು ನಷ್ಟದಲ್ಲಿವೆ ಮತ್ತು ಎಲ್ಲೆಲ್ಲಿ ಅಧಿಕಾರಿಗಳು ದುರುಪಯೋಗ ಮಾಡಿದ್ದಾರೆ ಅಥವಾ ಅವರ ವತಿಯಿಂದ ಈ ಸಂಘಗಳು ತೊಂದರೆಯಲ್ಲಿವೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಆದರೆ ಈ ನಾನ್ ಅಫಿಷಿಯಲ್ಸ್ ಮೇಲೆ ತೆಗೆದುಕೊಳ್ಳಬೇಕಾದರೆ ತಪ್ಪಾಗಿ ಗೊತ್ತಿರುವ ಹಾಗೆ ರೂಲ್ಸ್ ಪ್ರಕಾರ ಎನ್‌ಕ್ವೈರಿ ಮಾಡಿ ಅವರು ತಪ್ಪಿತಸ್ಥರು ಎಂದು ಕಂಡ ಮೇಲೆ ಕ್ರಿಮಿನಲ್ ಕೇಸ್ ಹಾಕಬೇಕಾಗುತ್ತದೆ. ಆದಕ್ಕೆ ಯಾವ ಯಾವ ಸಂಘಗಳಲ್ಲಿಈ ರೀತಿ ಆಗಿದೆ ಅದನ್ನು ಪರಿಶೀಲಿಸಿ ಸಂಬಂಧ ಪಟ್ಟಂಥ ಅಧಿಕಾರಿಗಳ ಮೇಲೆ ಮತ್ತು ಅಧಿಕಾರೇತರ ಮೇಲೆ ಇಬ್ಬರ ಮೇಲೂ ಕೂಡ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಮೋಟಮ್ಮ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಹಕಾರ ಮಂತ್ರಿಗಳು ಬಹಳ ದಕ್ಷ ಮಂತ್ರಿಗಳು, ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಯಾವುದೇ ಸಹಕಾರ ಸಂಘ ಈ ರೀತಿ ನಷ್ಟ ಹೊಂದುತ್ತಿದೆ ಎಂದಾಗ ಪ್ರಥಮ ಹಂತದಲ್ಲಿ ನಾವು ಅವರ ಮೇಲೆ ಸಿವಿಯರ್ ಆಕ್ಷನ್ ತೆಗೆದುಕೊಂಡರೆ ಉಳಿದ ಸಹಕಾರ ಸಂಘಗಳು ಈ ರೀತಿ ದಾರಿ ತಪ್ಪಲಿಕ್ಕೆ ಅವಕಾಶ ಇರುವುದಿಲ್ಲ. ಕೊಡಗಿನಲ್ಲಿ ೩೧ ಸಹಕಾರ ಸಂಘಗಳು ನಷ್ಟದಲ್ಲಿವೆ. ಎನ್ನುವ ಮಾತನ್ನು ಹೇಳಿದ್ದೀರಿ, ಆದರೆ ಇದು ಎಲ್ಲಾ ಜಿಲ್ಲೆಗಳಿಗೂ ಅನ್ವಯಿಸುತ್ತದೆ. ಅದಕ್ಕೆ ಅಲ್ಲಿ ಕೆಲಸ ಮಾಡುವ ಅಧಿಕಾರಿಗಳೆ ಯಾರು ಹಣ ನುಂಗುತ್ತಾರೆ ಯಾರು ಪ್ರಾಮಾಣಿಕವಾಗಿ ಕೆಲಸ ಮಾಡುವುದಿಲ್ಲ ಅವರ ಮೇಲೆ ನೀವು ಕಠಿಣ ಕ್ರಮ ತೆಗೆದುಕೊಂಡರೆ ಸಹಕಾರ ಸಂಘಗಳು ಹೆಚ್ಚು ಈ ರೀತಿ ನಷ್ಟ ಹೊಂದಲಿಕ್ಕೆ ಸಾಧ್ಯತೆ ಇರುವುದಿಲ್ಲ. ಆಮೇಲೆ ಹಣ ವಸೂಲಾತಿ ಯಾದ ಮೇಲೆ ಕೆಲವು ನಷ್ಟದಲ್ಲಿ ನಡೆಯುತ್ತಿವೆ ಎಂದು ಹೇಳುತ್ತೀರಿ. ಕಾಫಿ ಏರಿಯಾದಲ್ಲಿ ನೀವೇ ಜನರಲ್ ಆಗಿ ಹೇಳುತ್ತೀರಿ, ಶ್ರೀಮಂತ ಜಿಲ್ಲೆಗಳು ತಾಲ್ಲೂಕುಗಳು ಎಂದು. ಅಂತಹ ಕಡೆ ವಸೂಲಾತಿ ಆಗುವುದಿಲ್ಲ ಎಂದು ಹೇಳಿದರೆ, ಇನ್ನೂ ಹಿಂದುಳಿದ ಪ್ರದೇಶಗಳಿಂದು ಏನಿವೆ ಅಂತಹ ಕಡೆ ಈ ಸಹಕಾರ ಸಂಘಗಳು ಲಾಭದಾಯಕವಾಗಿ ನಡೆಯುವುದಕ್ಕೆ ಸಾಧ್ಯವಿದೆಯೇ ? ಅಲ್ಲಿ ನಿಮ್ಮ ಅಧಿಕಾರಿಗಳು ತಪ್ಪು ಮಾಡುತ್ತಾರೆಂದು ನನಗೆ ಅನ್ನಿಸುತ್ತದೆ. ಏಕೆಂದರೆ, ವಸೂಲಾತಿಗೆ ಹೋದಾಗ ಅವರು ಸಿನ್‌ಸಿಯರ್ ಆಗಿ ವಸೂಲು ಮಾಡುವುದಿಲ್ಲ. ಆದಕ್ಕೆ ನೀವು ಎಲ್ಲಿ ವಸೂಲಾತಿ ಕಡಿಮೆ ಮಾಡುತ್ತಾರೆ ಅಂತಹ ಕಡೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ನೀವು ಕಠಿಣ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ತಮಗೂ ಕೂಡ ಗೊತ್ತಿದೆ ಹಾಗೂ ಎಲ್ಲರಿಗೂ ಗೊತ್ತಿದೆ. ನಾವು ಯಾವಾಗಲೂ ವಸೂಲಾತಿಗೆ ಹೋದರೆ ಈ ಕಡೆ ಸದಸ್ಯರು ಆ ಕಡೆ ಸದಸ್ಯರು ಈ ವರ್ಷ ವಸೂಲಾತಿ ಮಾಡಬೇಡಿ ಈ ವರ್ಷ ನಮ್ಮ ಹತ್ತಿರ ಬರಬೇಡಿ, ಮತ್ತು ಊರು ಊರಿನಲ್ಲಿ ಬೋರ್ಡ್ ಹಾಕಿಕೊಂಡು ಕುಳಿತಿದ್ದಾರೆ, ಅವರಿಗೂ ಕೂಡ ಗೊತ್ತಿದೆ. ನಮ್ಮ ಊರಿಗೆ ಯಾರೂ ಕೂಡ ಬರಬಾರದು ಸಹಕಾರ ಸಂಘಗಳಿಂದ ಪಡೆದಂತಹ ಸಾಲವನ್ನು ನಾವು ಮರುಪಾವತಿ ಮಾಡುವುದಿಲ್ಲ. ಇದು ನಮ್ಮದೇ ಆದ ಹಣ ಎನ್ನುತಕ್ಕಂತಹ ವಾದ ಇಲ್ಲಿ ಇದೆ. ಈ ರೀತಿಯಾಗಿ ನಮ್ಮ ನಾನ್ ಅಫಿಷಿಯಲ್ಸ್ ಮತ್ತು ಮುಖಂಡರು ಸಹಕಾರಿ ಚಳುವಳಿಯಲ್ಲಿರತಕ್ಕಂಥವರೂ ಕೂಡ ಇದೇ ರೀತಿ ವರ್ತನೆ ಮಾಡುತ್ತಿರುವುದರಿಂದ ಇವತ್ತು ನಮ್ಮಿಂದ ವಸೂಲಾತಿ ಕುಂಠಿತವಾಗಿದೆ. ಬರೀ ಅಧಿಕಾರಿಗಳು ಅಷ್ಟೇ ಅಲ್ಲ, ಏಕೆಂದರೆ ಅನೇಕ ಕಡೆ ಇವತ್ತು ೮೫ ಪರ್ಸೆಂಟ್ ಸೊಸೈಟಿಗಳಲ್ಲಿ ನಾವು ಚುನಾವಣೆ ಮಾಡಿ ನಾನ್ ಅಫಿಷಿಯಲ್ಸ್ ಇವತ್ತಿನ ದಿವಸ ಅಲ್ಲಿ ಅಧ್ಯಕ್ಷರಾಗಿದ್ದಾರೆ. ಬರೀ ಎಲ್ಲೋ ಒಂದೆರಡು ಕಡೆ

ಸೂಪರ್‌ಸೀಡ್ ಮಾಡಿದ ಮೇಲೆ, ಅಡ್‌ಮಿನಿಸ್ಟ್ರೇಟರ್ ಮಾತ್ರ ಇರಬಹುದು. ಉಳಿದ ಕಡೆ ೮೫ ಪರ್ಸೆಂಟ್ ಜನ ಇವತ್ತು ಅಧ್ಯಕ್ಷರಾಗಿದ್ದಾರೆ. ಆದರೆ ಅವರು ಸಹಕಾರ ಇಲ್ಲದೆ ಅಥವಾ ಅಲ್ಲಿರ ತಕ್ಕಂತಹವರು ಯಾರು ಸಾಲವನ್ನು ಪಡೆದುಕೊಂಡಿದ್ದಾರೋ ಅವರ ಸಹಕಾರ ಮತ್ತು ಸಹಾಯ ಇಲ್ಲದೆ ವಸೂಲಾತಿ ಆಗುವುದಿಲ್ಲ. ಅದಕ್ಕಾಗಿ ಅಪೀಲ್ ಮಾಡಿಕೊಳ್ಳುತ್ತೇನೆ, ಮಾನ್ಯ ಸದಸ್ಯಣಿಯರಾಗಲಿ ಅಥವಾ ಸದಸ್ಯರಾಗಲೀ ಎಲ್ಲರೂ ಕೂಡ ಈ ವಸೂಲಾತಿಗೆ ಸಹಕಾರ ಕೊಟ್ಟರೆ ಖಂಡಿತ ಹೆಚ್ಚಿನ ಪ್ರಮಾಣದಲ್ಲಿ ನಾವು ಸಾಲ ವಸೂಲಾತಿ ಮಾಡಿ ಅದೇ ರೀತಿಯಾಗಿ ಡಿಸ್ಟ್ರಿಬ್ಯೂಷನ್ ಮಾಡುವುದಕ್ಕೆ ನಮಗೆ ಅವಕಾಶವಾಗುತ್ತದೆ ಎನ್ನುತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ. ಎರಡನೆಯದಾಗಿ ಶ್ರೀಮಂತ ಜಿಲ್ಲೆಗಳಲ್ಲಿಯೇ ಇವತ್ತು ನಾವು ತೊಂದರೆಗಿಡಾಗಿದ್ದೇವೆ. ಉದಾಹರಣೆಗೆ ಹೇಳುವುದಾದರೆ ಹಾಸನ ಜಿಲ್ಲೆ, ಮಂಡ್ಯ ಜಿಲ್ಲೆ, ಶಿವಮೊಗ್ಗ ಜಿಲ್ಲೆ ಅನೇಕ ಕಡೆ ನಮ್ಮ ವಸೂಲಾತಿ ಪ್ರಮಾಣ ಕಡಿಮೆ ಇರುವುದರಿಂದ ನಮ್ಮ ಡಿಸಿಸಿ ಬ್ಯಾಂಕ್‌ಗಳು ಇವತ್ತು ಡಿಫಂಕ್ಟ್‌ನಲ್ಲಿವೆ. ಆದರೆ ಇವತ್ತು ನಾವು ಚಾರುಕುಗೊಳಿಸಿದ್ದೇವೆ. ಅನೇಕ ನಮ್ಮ ಕೃಷಿಕರು ಮುಂದೆ ಬಂದು ಇವತ್ತು ನಾವು ಸಾಲ ಮರುಪಾವತಿ ಮಾಡಿದರೆ ನಮಗೆ ಒಳ್ಳೆಯದು ಆಗುತ್ತದೆ ಎನ್ನುವ ಭಾವನೆ ತಿಳಿದುಕೊಂಡಿದ್ದಾರೆ. ಅದಕ್ಕೆ ಇವತ್ತು ಬಹಳ ಜನ ಸಾಲ ಕೊಡುತ್ತಿದ್ದಾರೆ. ನಾನು ಬಹಳ ಹೆಮ್ಮೆಯಿಂದ ಹೇಳುತ್ತೇನೆ, ಹೋದಸಲ ೫೦ ಕೋಟಿ ರೂಪಾಯಿ ಕೊಟ್ಟರೆ ಈ ವರ್ಷ ಎರಡು ನೂರು ಕೋಟಿ ರೂಪಾಯಿ ಸಾಲವನ್ನು ಕೊಟ್ಟಿದ್ದೇವೆ. ನಮ್ಮ ಮುಂದೆ ಬರತಕ್ಕ ವರ್ಷದಲ್ಲಿ ಸುಮಾರು ಮೂರು ನೂರು ಕೋಟಿ ರೂಪಾಯಿ ಸಾಲವನ್ನು ಡಿಸ್ಟ್ರಿಬ್ಯೂಟ್ ಮಾಡತಕ್ಕ ಗುರಿಯನ್ನು ಇಟ್ಟುಕೊಂಡಿದ್ದೇವೆ. ಈ ಮಹತ್ತರ ವಾದಂಥ ಸಾಧನೆಯನ್ನು ನಾವು ಮಾಡಿದ್ದೇವೆ ಎಂಬುದನ್ನು ಸ್ಪಷ್ಟಪಡಿಸುತ್ತೇನೆ.

ಶ್ರೀಮತಿ ಸುಮಾ ವಸಂತ್. —ಚುನಾಯಿತ ಪ್ರತಿನಿಧಿಗಳು ಸಹಕಾರಿ ಸಂಘಗಳ ನಿಯಮಗಳನ್ನು ಪಾಲಿಸದಿದ್ದರೆ, ಅಂತಹ ಸಹಕಾರ ಸಂಘಗಳನ್ನು ರದ್ದು ಮಾಡಿ ಆಡಳಿತಾಧಿಕಾರಿಗಳನ್ನು ನೇಮಿಸುತ್ತೀರಾ? ಬಡವರು ಸಾಲ ತೆಗೆದುಕೊಂಡಿದ್ದರೆ, ಅವರ ಮನೆಗೆ ನುಗ್ಗಿ ತಟ್ಟೆ, ಚೊಂಬುಗಳನ್ನು ತೆಗೆದುಕೊಂಡು ಹೋಗುತ್ತೀರಿ, ದೊಡ್ಡವರು ಸಾಲ ತೆಗೆದುಕೊಂಡಿದ್ದರೆ ಅವರಿಂದ ವಸೂಲಾತಿಯನ್ನು ಸರಿಯಾಗಿ ಮಾಡಲು ಕ್ರಮಕೈಗೊಳ್ಳುತ್ತೀರಾ ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ. —ಶ್ರೀಮಂತರೇ ಇರಲಿ, ಯಾರೇ ಇರಲಿ, ಯಾರು ಸಹಕಾರ ಸಂಘಗಳಲ್ಲಿ ಹಣವನ್ನು ತೆಗೆದುಕೊಂಡಿದ್ದರೋ ಅವರಿಂದ ವಸೂಲಾತಿಯನ್ನು ಮಾಡಿಯೇ ಮಾಡುತ್ತೇವೆ. ಆದರೂ ಸಹ ನಾವು ಆದೇಶ ಕೊಟ್ಟಿದ್ದೇವೆ. ಕಡುಬಡವರು ಇದ್ದರೆ ಅಂತಹ ಕೇಸ್‌ಗಳನ್ನು ನೋಡಿ ಕೊಳ್ಳುವಂತೆ ನಾವು ಹೇಳಿದ್ದೇವೆ. ದೊಡ್ಡವರ ಸಾಲಗಳನ್ನು ವಸೂಲಾತಿ ಮಾಡುತ್ತಿದ್ದೇವೆ. ಅದ್ದರಿಂದಲೇ ಇವತ್ತಿನ ದಿವಸ ನಮಗೆ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ವಸೂಲಾತಿ ಮಾಡಲು ಸಾಧ್ಯವಾಗುತ್ತಿದೆ. ಎಲ್ಲೆಲ್ಲಿ ಸಹಕಾರ ಸಂಘಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವೋ ಅಂತಹ ಕಡೆಗಳಲ್ಲಿ ಖಂಡಿತವಾಗಿ ಅವುಗಳನ್ನು ಸೂಪರ್‌ಸೀಡ್ ಮಾಡಿ ಅಧಿಕಾರಿಗಳನ್ನು ಹಾಕುತ್ತೇವೆ. ಆದರೆ ಬರೀ ಅಧಿಕಾರಿಗಳನ್ನು ಹಾಕಿದರೆ ಏನೂ ಸುಧಾರಣೆ ಆಗುವುದಿಲ್ಲ. ಎಲ್ಲಿಯವರೆಗೆ ಇಂತಹ ಸಂಘಗಳಲ್ಲಿ ಇರತಕ್ಕ ಸದಸ್ಯರುಗಳು ಮತ್ತು ಡೈರೆಕ್ಟರುಗಳು ಪ್ರಾಮಾಣಿಕವಾಗಿ ಕೆಲಸ ಮಾಡುವುದಿಲ್ಲವೋ ಅಲ್ಲಿಯವರೆಗೆ ಈ ಸಂಘಗಳು ಅಭಿವೃದ್ಧಿಯಾಗುವುದಿಲ್ಲ ಎನ್ನತಕ್ಕ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ.

ಗ್ರಾಮ ಪಂಚಾಯಿತಿಗಳಿಗೆ ನೀಡಲಾದ ಅನುದಾನದ ಪ್ರಮಾಣ

೩೧೦ (೫೦೪) ಶ್ರೀ ಕೆ. ವಿಜಯಕುಮಾರ್ ಶೆಟ್ಟಿ (ಸೂರತ್ಕಲ್).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಾರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದ ನೂತನ ''ಗ್ರಾಮ ಪಂಚಾಯ್ತಿ'' ಗಳಿಗೆ ಸರ್ಕಾರ ನೀಡಲಾದ ಅನುದಾನ ಪ್ರಮಾಣವೆಷ್ಟು ?

ಆ) ಗ್ರಾಮ ಪಂಚಾಯ್ತಿಗಳ ಅನುದಾನದಲ್ಲಿ "ವ್ಯಾಪಕ ಪಣ" ಸಿಬ್ಬಂದಿ ವೇತನಕ್ಕೆ ಖರ್ಚಾಗುವುದು ನಿಜವೇ ?

ಇ) ಮೇಲ್ಕಂಡ ಪಂಚಾಯ್ತಿಗಳನ್ನು ಆರ್ಥಿಕವಾಗಿ ಸಶಕ್ತಗೊಳಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?